ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20 : ದಿನಾಂಕ : 03–02–2020**

# ಪತ್ರಿಕಾ ಆಮಂತ್ರಣ

1. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ 'ಜನ್ನಸೇಹಿ' ಸಹಾಯ ವೇದಿಕೆ ಹಾಗೂ ವಾಟ್ಸ್‌ಆಪ್ 9980299802, Twitter:@Karnataka_Dipr ಹಾಗೂ ಕಾರ್ಮಿಕ ಇಲಾಖೆಯ 'ಆಶಾದೀಪ ಯೋಜನೆ' ಅಂತರ್ಜಾಲ (ಬ್ಲಾಕ್‌ಚೈನ್ ತಂತ್ರಜ್ಞಾನದೊಂದಿಗೆ) ಮತ್ತು ಕಾರ್ಮಿಕ ಸಹಾಯವಾಣಿ 155214, ವಾಟ್ಸ್‌ಆಪ್ 9333333684 ಕ್ಕೆ ಚಾಲನೆ.

**ಚಾಲನೆ:**

ಬಿ.ಎಸ್. ಯಡಿಯೂರಪ್ಪ,
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

**ಮುಖ್ಯ ಅತಿಥಿಗಳು:**

ಎಸ್. ಸುರೇಶ್ ಕುಮಾರ್,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಸಕಾಲ ಹಾಗೂ ಕಾರ್ಮಿಕ ಸಚಿವರು.

**ಪ್ರಾಸ್ತಾವಿಕ ನುಡಿ:**

ಬೇಳೂರು ಸುದರ್ಶನ,
ಮುಖ್ಯಮಂತ್ರಿಗಳ ಇ–ಆಡಳಿತ ಸಲಹೆಗಾರರು.

**ಉಪಸ್ಥಿತಿ:**
ಟಿ.ಎಂ. ವಿಜಯ್ ಭಾಸ್ಕರ್, ಐ.ಎ.ಎಸ್
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು.

ದಿನಾಂಕ: 04–02–2020 ಮಂಗಳವಾರ, ಸಮಯ: ಸಂಜೆ 5–30 ಗಂಟೆಗೆ

ಸ್ಥಳ: ಸಮ್ಮೇಳನ ಸಭಾಂಗಣ, # 334, ಮೂರನೇ ಮಹಡಿ, ವಿಧಾನಸೌಧ, ಬೆಂಗಳೂರು.

2 ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ವತಿಯಿಂದ ಪದ್ಮಭೂಷಣ ಡಾ. ಆರ್. ಕೆ. ಶ್ರೀಕಂಠನ್ ಜನ್ಮಶತಮಾನೋತ್ಸವ ಕಾರ್ಯಕ್ರಮ

**ಉದ್ಘಾಟನೆ ಮತ್ತು ನುಡಿ ನಮನ:**

ಸಂಗೀತ ವಿದ್ಯಾನಿಧಿ ಡಾ. ವಿದ್ಯಾಭೂಷಣ,
ವಿದ್ವಾಂಸರು, ಬೆಂಗಳೂರು.

**ಅಧ್ಯಕ್ಷತೆ:**

ಆನೂರು ಅನಂತಕೃಷ್ಣ ಶರ್ಮ,
ಅಧ್ಯಕ್ಷರು,
ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ,
ಬೆಂಗಳೂರು.

ದಿನಾಂಕ: 04–02–2020 ಮಂಗಳವಾರ, ಸಮಯ: ಸಂಜೆ 5–00 ಗಂಟೆಗೆ

ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.

## ಪತ್ರಿಕಾ ಪ್ರಕಟಣೆ

## ಫೆಬ್ರವರಿ 4 ರಂದು
## ಪದ್ಮಭೂಷಣ ಡಾ. ಆರ್. ಕೆ. ಶ್ರೀಕಂಠನ್ ಜನ್ಮಶತಮಾನೋತ್ಸವ

**ಬೆಂಗಳೂರು ಫೆ. 3 (ಕರ್ನಾಟಕ ವಾರ್ತೆ)**

**ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ವತಿಯಿಂದ ಫೆಬ್ರವರಿ 4 ರಂದು ಸಂಜೆ 5.00 ಗಂಟೆಗೆ ನಯನ ಸಭಾಂಗಣ, ಕನ್ನಡ ಭವನ ಜೆ.ಸಿ. ರಸ್ತೆ, ಬೆಂಗಳೂರು ಇಲ್ಲಿ ಪದ್ಮಭೂಷಣ ಡಾ. ಆರ್.ಕೆ. ಶ್ರೀಕಂಠನ್ ಜನ್ಮಶತಮಾನೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.**

**ಈ ಕಾರ್ಯಕ್ರಮದ ಉದ್ಘಾಟನೆ ಮತ್ತು ನುಡಿ ನಮನವನ್ನು ಸಂಗೀತ ವಿದ್ಯಾನಿಧಿ ಡಾ. ವಿದ್ಯಾಭೂಷಣ, ವಿದ್ವಾಂಸರು, ಬೆಂಗಳೂರು ಇವರು ನಡೆಸಿಕೊಡಲಿದ್ದಾರೆ.**

**ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷರಾದ ಆನೂರು ಅನಂತಕೃಷ್ಣ ಶರ್ಮ ಅವರು ನಡೆಸಿಕೊಡಲಿದ್ದಾರೆ.**

**ಇದೇ ಸಂದರ್ಭದಲ್ಲಿ ಪದ್ಮಭೂಷಣ ಡಾ. ಆರ್.ಕೆ. ಶ್ರೀಕಂಠನ್ ಅವರ ಜೀವನ–ಸಾಧನೆ ಕುರಿತ ಸಾಕ್ಷ್ಯಚಿತ್ರ ಪ್ರದರ್ಶನವನ್ನು ಸಹ ಹಮ್ಮಿಕೊಳ್ಳಲಾಗಿದೆ.**

## ಕರ್ನಾಟಕ ಮತ್ತು ಗೋವಾ ರಾಜ್ಯದ ಎನ್.ಸಿ.ಸಿ. ಕೆಡೆಟ್‌ಗಳ ಗೌರವಾರ್ಥ "ಲಘು ಸಾಂಸ್ಕೃತಿಕ" ಕಾರ್ಯಕ್ರಮ

**ಬೆಂಗಳೂರು ಫೆ. 3 (ಕರ್ನಾಟಕ ವಾರ್ತೆ)**

ಗಣರಾಜ್ಯೋತ್ಸವದಲ್ಲಿ ಪೆರೇಡ್‌ನಲ್ಲಿ ಭಾಗವಹಿಸಿ, ವಾಪಾಸ್ಸಾಗಲಿರುವ ಕರ್ನಾಟಕ ಮತ್ತು ಗೋವಾ ರಾಜ್ಯದ ಎನ್.ಸಿ.ಸಿ ಕೆಡೆಟ್‌ಗಳ ಗೌರವಾರ್ಥ ಫೆಬ್ರವರಿ 4 ರಂದು ಸಂಜೆ 6.00 ಗಂಟೆಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ "ಲಘು ಸಾಂಸ್ಕೃತಿಕ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಅಂದು ಸಂಜೆ 5.00 ಗಂಟೆಗೆ ವಿಧಾನಸೌಧದ ಪೂರ್ವ ದ್ವಾರದ ಮೆಟ್ಟಿಲುಗಳ ಬಳಿ ಎನ್.ಸಿ.ಸಿ. ಕೆಡೆಟ್‌ಗಳೊಂದಿಗೆ "ಫೋಟೋ ಸೆಷನ್" ಕಾರ್ಯಕ್ರಮವಿದ್ದು, ತದನಂತರ ಅವರುಗಳಿಗೆ ರಾತ್ರಿ 7.00 ಗಂಟೆಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ "ಭೋಜನ ಕೂಟ" ವನ್ನು ಸಹ ಏರ್ಪಡಿಸಲಾಗಿದೆ.

## ಸಚಿವರ ಪ್ರವಾಸ

**ಬೆಂಗಳೂರು ಫೆಬ್ರವರಿ 3 (ಕರ್ನಾಟಕ ವಾರ್ತೆ) :**

ವಸತಿ, ತೋಟಗಾರಿಕೆ ಮತ್ತು ರೇಷ್ಮೆ ಸಚಿವ ವಿ. ಸೋಮಣ್ಣ ಅವರು ಫೆಬ್ರವರಿ 4 ರಂದು ಹಾಸನ ಜಿಲ್ಲೆಯಲ್ಲಿ ಪ್ರವಾಸಕೈಗೊಂಡು ಅಂದೇ ರಾತ್ರಿ ಕೇಂದ್ರಸ್ಥಾನಕ್ಕೆ ಹಿಂತಿರುಗುವರು.